<u>**ಕರ್ನಾಟಕ ವಿಧಾನ ಪರಿಷತ್ತು**</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 529 |
| ಸದಸ್ಯರ ಹೆಸರು | ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್)<br>(ಶಿಕ್ಷಕರ ಕ್ಷೇತ್ರ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಡೆಯುತ್ತಿರುವ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಮುಖ್ಯ ಖನಿಜ ಮತ್ತು ಉಪಖನಿಜಗಳ ಗಣಿಗಾರಿಕೆಗಾಗಿ ಮಂಜೂರು ಮಾಡಲಾಗಿರುವ ಗುತ್ತಿಗೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಸರ್ಕಾರದ ಆದೇಶ ಮತ್ತು ನಿಯಮದ ಪ್ರಕಾರ ಒಂದು ಕೋಟಿ ರೂ. ವರೆಗೂ ಗುತ್ತಿಗೆಯನ್ನು ಪ್ರವರ್ಗ-Iರ ಜಾತಿಯ ಜನಾಂಗದವರಿಗೆ ನೀಡಬೇಕಾಗಿದ್ದು, ಇದುವರೆಗೂ ಎಷ್ಟು ಪ್ರವರ್ಗ-Iರ ಜಾತಿಗಳಿಗೆ ಗುತ್ತಿಗೆಯನ್ನು ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಲ್ಲಿ ಪ್ರವರ್ಗ-I ವರ್ಗದವರಿಗೆ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿಗೆ ಮೀಸಲಾತಿ ಕಲ್ಪಿಸಿರುವುದಿಲ್ಲ. |
| ಇ) | ಗಣಿಗಾರಿಕೆ ಕೈಗಾರಿಕೆಗಳನ್ನು ಸ್ಥಾಪಿಸಲು ಇರುವ ನಿಯಮಗಳು ಯಾವುವು? | • ಮುಖ್ಯ ಖನಿಜಗಳ ಸಂಬಂಧ ಲಭ್ಯತೆ ದೃಢಪಟ್ಟಿರುವ ಪ್ರದೇಶಗಳಲ್ಲಿ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) (ತಿದ್ದುಪಡಿ) ಕಾಯ್ದೆ, 2015 ರ ಕಲಂ 10(B) ರಡಿಯಲ್ಲಿ ಹರಾಜು ಮೂಲಕ ಗಣಿ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಖನಿಜ ಲಭ್ಯತೆ ದೃಢಪಡದ ಪ್ರದೇಶಗಳಲ್ಲಿ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) (ತಿದ್ದುಪಡಿ) ಕಾಯ್ದೆ, 2015 ರ ಕಲಂ 11 ರಡಿ ಸಂಯುಕ್ತ ಪರವಾನಿಗೆ (Composite Licence) (Prospecting-cum-Mining Lease) ಯನ್ನು ಸದರಿ ಕಾಯ್ದೆಯಡಿ ರೂಪಿಸಲಾದ Mineral (Auction) Rules, 2015ರ ನಿಯಮ 9(4) ಮತ್ತು 10 ರಂತೆ ಹರಾಜು ಮಾಡಿ ಯಶಸ್ವಿಯಾದ ಬಿಡ್‌ದಾರರನ್ನು ಪರಿಗಣಿಸಿದ ನಂತರ The Mineral (Auction) Rules, 2015 ಮತ್ತು Mineral (Other Than Atomic and Hydro Carbons Energy Minerals) Concession Rules 2016 ರಡಿ ಗಣಿ ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| | | • ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ರ ಸೆಕ್ಷನ್ 15 ರಂತೆ ರಾಜ್ಯ ಸರ್ಕಾರಗಳಿಗೆ ನೀಡಿರುವ ಅಧಿಕಾರದನ್ವಯ ರಾಜ್ಯದಲ್ಲಿ ಉಪ ಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನಿಯಂತ್ರಣ ಕುರಿತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ನ್ನು ಜಾರಿಗೆ ತರಲಾಗಿದ್ದು, ಸದರಿ ನಿಯಮಗಳಂತೆ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. |
| | | • ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಗುರುತಿಸಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದ ನಂತರ ಅಧಿಸೂಚನೆ ಜಾರಿ ಮಾಡಬೇಕಾಗಿರುತ್ತದೆ. ನಂತರ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಗುರುತಿಸಿರುವ ಉಪಖನಿಜದ ನಿಕ್ಷೇಪದ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಟೆಂಡರ್ ಕಂ ಹರಾಜು ಪ್ರಕ್ರಿಯೆ ಕೈಗೊಂಡು ನಿರ್ದಿಷ್ಟ ಉಪಖನಿಜಗಳಿಗೆ ಸರ್ಕಾರದಿಂದ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳಿಗೆ ಸಂಬಂಧಿಸಿದಂತೆ ನಿರ್ದೇಶಕರಿಂದ ಬಿಡ್ ಸ್ವೀಕರಿಸಿಕೊಂಡ ನಂತರ ಯಶಸ್ವಿ ಬಿಡ್ದುದಾರರಿಂದ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆಯನ್ನು ಮಂಜೂರು ಮಾಡಲಾಗುತ್ತದೆ. |
| | | • ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ನ್ನು ಜಾರಿಗೆ ತಂದಿದ್ದು, ದಿನಾಂಕ 12.08.2016ರ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಪರಿಗಣಿಸಲಾಗಿದ್ದು, ಸದರಿ ಅರ್ಜಿಗಳ ಪ್ರದೇಶಕ್ಕೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳು, ತಾಂತ್ರಿಕ ವರದಿಗಳು, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದ ನಂತರ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮ ವಹಿಸಬೇಕಾಗಿರುತ್ತದೆ. |
| | | • ಪಟ್ಟಾ ಜಮೀನುಗಳಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರಗಳು, ತಾಂತ್ರಿಕ ವರದಿಗಳು, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲು ಗಣಿಗಾರಿಕೆಗೆ ಪರವಾನಗಿ ನೀಡಲಾಗುತ್ತಿದೆ. |
| | | • ಗಣಿ ಗುತ್ತಿಗೆಗಳನ್ನು Mineral (Other Than Atomic and Hydro Carbons Energy Minerals) Concession Rules, 2016 ರ Schedule-VII ರಂತೆ ಮತ್ತು ಕಲ್ಲು ಗಣಿ ಗುತ್ತಿಗೆಗಳನ್ನು ಕೆಎಂಎಂಸಿ ನಿಯಮಗಳು, 1994ರ ನಮೂನೆ-ಇ ರಲ್ಲಿನ ಗುತ್ತಿಗೆ ಕರಾರು, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೀಡಲಾಗುತ್ತಿದೆ. |

ಸಂಖ್ಯೆ ಸಿಐ-ಎಂಎಂಎನ್/68/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ

## ರಾಜ್ಯದಲ್ಲಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆಗಳ ವಿವರಗಳು

| ಕ್ರ. ಸಂ. | ಜಿಲ್ಲೆ | ಚಾಲ್ತಿ ನಿರ್ದಿಷ್ಟ ಕಲ್ಲುಗಣಿ ಗುತ್ತಿಗೆಗಳು | | | | | | ಚಾಲ್ತಿ ನಿರ್ದಿಷ್ಟವಲ್ಲದ ಕಲ್ಲುಗಣಿ ಗುತ್ತಿಗೆಗಳು | | | | | |
|---|---|---|---|---|---|---|---|---|---|---|---|---|---|
| | | ಮಂಜೂರಾದ ಒಟ್ಟು ಗುತ್ತಿಗೆಗಳು | ಒಟ್ಟು ವಿಸ್ತೀರ್ಣ (ಎಕರೆ / ಗುಂಟೆಗಳಲ್ಲಿ) | ಕಾರ್ಯನಿರತ | ವಿಸ್ತೀರ್ಣ (ಎಕರೆ / ಗುಂಟೆಗಳಲ್ಲಿ) | ನಿಷ್ಕ್ರಿಯ | ವಿಸ್ತೀರ್ಣ (ಎಕರೆ / ಗುಂಟೆಗಳಲ್ಲಿ) | ಮಂಜೂರಾದ ಒಟ್ಟು ಗುತ್ತಿಗೆಗಳು | ಒಟ್ಟು ವಿಸ್ತೀರ್ಣ (ಎಕರೆ / ಗುಂಟೆಗಳಲ್ಲಿ) | ಕಾರ್ಯನಿರತ | ವಿಸ್ತೀರ್ಣ (ಎಕರೆ / ಗುಂಟೆಗಳಲ್ಲಿ) | ನಿಷ್ಕ್ರಿಯ | ವಿಸ್ತೀರ್ಣ (ಎಕರೆ / ಗುಂಟೆಗಳಲ್ಲಿ) |
| 1 | ಬೆಂಗಳೂರು ಗ್ರಾಮಾಂತರ | 61 | 100.70 | 25 | 62.39 | 36 | 38.31 | 95 | 352.40 | 69 | 271.21 | 26 | 81.19 |
| 2 | ಬೆಂಗಳೂರು ನಗರ | 0 | 0.00 | 0 | 0.00 | 0 | 0.00 | 163 | 626.49 | 125 | 520.21 | 38 | 106.28 |
| 3 | ಚಾಮರಾಜನಗರ | 32 | 145.55 | 18 | 87.18 | 14 | 58.37 | 106 | 294.45 | 70 | 194.27 | 36 | 100.18 |
| 4 | ಚಿಕ್ಕಮಗಳೂರು | 12 | 64.02 | 3 | 15.01 | 9 | 49.01 | 127 | 356.06 | 70 | 216.03 | 57 | 140.03 |
| 5 | ಚಿಕ್ಕಬಳ್ಳಾಪುರ | 68 | 257.36 | 58 | 234.23 | 10 | 23.13 | 133 | 674.24 | 99 | 447.18 | 34 | 227.06 |
| 6 | ದಕ್ಷಿಣ ಕನ್ನಡ | 2 | 2.06 | 2 | 2.06 | 0 | 0.00 | 129 | 316.3 | 116 | 287.16 | 13 | 29.14 |
| 7 | ಉಡುಪಿ | 12 | 132.3 | 9 | 109.06 | 3 | 23.24 | 146 | 327.66 | 130 | 304.37 | 16 | 23.29 |
| 8 | ಹಾಸನ | 39 | 219.53 | 29 | 171.22 | 10 | 48.31 | 143 | 748.32 | 110 | 669.14 | 33 | 79.18 |
| 9 | ಕೋಲಾರ | 4 | 17.35 | 1 | 3.20 | 3 | 14.15 | 114 | 487.09 | 71 | 281.05 | 43 | 206.04 |
| 10 | ಮಂಡ್ಯ | 3 | 17.00 | 0 | 0.00 | 3 | 17.00 | 95 | 203.71 | 64 | 138.39 | 31 | 65.32 |
| 11 | ಮೈಸೂರು | 16 | 53.15 | 9 | 29.12 | 7 | 24.03 | 30 | 62.15 | 29 | 61.15 | 1 | 1.00 |
| 12 | ಕೊಡಗು | 1 | 0.35 | 1 | 0.35 | 0 | 0.00 | 25 | 44.24 | 25 | 44.24 | 0 | 0.00 |
| 13 | ರಾಮನಗರ | 52 | 245.08 | 28 | 114.01 | 24 | 131.07 | 109 | 641.09 | 65 | 358.01 | 44 | 283.08 |
| 14 | ಶಿವಮೊಗ್ಗ | 0 | 0 | 0 | 0 | 0 | 0 | 80 | 78.21 | 65 | 66.01 | 15 | 12.20 |
| 15 | ತುಮಕೂರು | 36 | 132.33 | 21 | 92.00 | 15 | 40.33 | 175 | 655.36 | 123 | 484.03 | 52 | 171.33 |
| 16 | ಬೆಳಗಾವಿ | 9 | 48.15 | 8 | 38.15 | 1 | 10.00 | 299 | 1190.5 | 263 | 1075.13 | 36 | 115.37 |
| 17 | ಬಳ್ಳಾರಿ | 9 | 30.24 | 3 | 12.04 | 6 | 18.20 | 75 | 408.5 | 45 | 301.30 | 30 | 107.20 |
| 18 | ಬೀದರ್ | 0 | 0 | 0 | 0.00 | 0 | 0.00 | 46 | 106.6 | 36 | 87.30 | 10 | 19.30 |
| 19 | ವಿಜಯಪುರ | 0 | 0 | 0 | 0.00 | 0 | 0.00 | 115 | 350.68 | 101 | 321.33 | 14 | 29.35 |
| 20 | ಚಿತ್ರದುರ್ಗ | 3 | 11.25 | 3 | 11.25 | 0 | 0.00 | 91 | 332.02 | 45 | 145.01 | 46 | 187.01 |
| 21 | ದಾವಣಗೆರೆ | 0 | 0 | 0 | 0.00 | 0 | 0.00 | 123 | 243.18 | 89 | 201.13 | 34 | 42.05 |
| 22 | ಧಾರವಾಡ | 0 | 0 | 0 | 0.00 | 0 | 0.00 | 140 | 282.41 | 116 | 235.13 | 24 | 47.28 |
| 23 | ಗದಗ | 4 | 24.29 | 0 | 0.00 | 4 | 24.29 | 65 | 198.48 | 63 | 195.28 | 2 | 3.20 |
| 24 | ಹಾವೇರಿ | 0 | 0 | 0 | 0.00 | 0 | 0.00 | 68 | 133.58 | 41 | 86.26 | 27 | 47.32 |
| 25 | ಕಲಬುರಗಿ | 0 | 0 | 0 | 0.00 | 0 | 0.00 | 266 | 1833.52 | 227 | 1296.37 | 39 | 537.15 |
| 26 | ಯಾದಗಿರಿ | 1 | 11 | 1 | 11.00 | 0 | 0.00 | 29 | 70.55 | 12 | 37.21 | 17 | 33.34 |
| 27 | ಹೊಸಪೇಟೆ | 0 | 0.00 | 0 | 0.00 | 0 | 0.00 | 123 | 446.25 | 85 | 340.20 | 38 | 106.05 |
| 28 | ಬಾಗಲಕೋಟೆ | 58 | 478.22 | 34 | 345.22 | 24 | 133.00 | 33 | 115.54 | 20 | 73.33 | 13 | 42.21 |
| 29 | ಕೊಪ್ಪಳ | 248 | 1112.31 | 125 | 564.11 | 123 | 548.20 | 63 | 315.41 | 47 | 240.34 | 16 | 75.07 |
| 30 | ರಾಯಚೂರು | 58 | 245.22 | 35 | 151.22 | 23 | 94.00 | 56 | 185.41 | 42 | 145.09 | 14 | 40.32 |
| 31 | ಉತ್ತರ ಕನ್ನಡ | 5 | 31.35 | 1 | 11.05 | 4 | 20.30 | 24 | 135.05 | 20 | 119.05 | 4 | 16.00 |
| | ಒಟ್ಟು | 733 | 3380.01 | 414 | 2065.07 | 319 | 1316.14 | 3286 | 12216.05 | 2483 | 9243.11 | 803 | 2974.14 |

CI-68-MMN-2025

Deputy Director (Min. Admn)
Dept. of Mines & Geology
Bangalore-560001

ise list

ಅನುಬಂಧ

ರಾಜ್ಯದಲ್ಲಿ ಮಂಜೂರು ಮಾಡಿರುವ ಮುಖ್ಯ ಖನಿಜ ಗಣಿ ಗುತ್ತಿಗೆಗಳ ವಿವರಗಳು

| Sl.No. | District | Active leases | Extent (in Hect.) | Idle leases | Extent (in Hect.) | Grand Total | Extent (in Hect.) |
|---|---|---|---|---|---|---|---|
| 1 | Bagalakote | 33 | 490.27 | 46 | 4964.95 | 79 | 5455.22 |
| 2 | Ballari | 32 | 4702.60 | 20 | 1478.56 | 52 | 6181.16 |
| 3 | Belagavi | 8 | 1164.80 | 9 | 826.72 | 17 | 1991.52 |
| 4 | Chickamagalur | 0 | 0.00 | 1 | 4.89 | 1 | 4.89 |
| 5 | Chitradurga | 8 | 449.23 | 27 | 2110.03 | 35 | 2559.26 |
| 6 | Davanagere | 1 | 32.23 | 1 | 32.31 | 2 | 64.54 |
| 7 | Kalburgi | 8 | 3944.96 | 8 | 2570.93 | 16 | 6515.89 |
| 8 | Kolar | 0 | 0.00 | 1 | 5213.21 | 1 | 5213.21 |
| 9 | Mysuru | 4 | 114.86 | 5 | 227.03 | 9 | 341.89 |
| 10 | Raichur | 2 | 550.33 | 3 | 443.11 | 5 | 993.44 |
| 11 | shimoga | 0 | 0.00 | 1 | 40.12 | 1 | 40.12 |
| 12 | Tumakuru | 2 | 37.37 | 7 | 412.85 | 9 | 450.22 |
| 13 | Uttara Kannada | 3 | 198.71 | 7 | 308.00 | 10 | 506.71 |
| 14 | Vijayanagara | 4 | 145.21 | 4 | 82.06 | 8 | 227.27 |
| **Grand Total** | | **105** | **11830.57** | **140** | **18714.77** | **245** | **30545.34** |

Deputy Director (Min. Admn)
Dept. of Mines & Geology
Bangalore-560001